**<u>ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ</u>**

ಸಿ.ಸಿ. ನಂ. 1080/2020

ಸಿ.ಡಬ್ಲೂಃ 6 ಪಿ.ಡಬ್ಲೂಃ 4

ಹೆಸರುಃ ಬಸಮ್ಮ

ತಂದೆಯ ಹೆಸರುಃ ಬಸಪ್ಪ ಚಲವಾದಿ

ವಯಸ್ಸುಃ 22 ವರ್ಷ

ಉದ್ಯೋಗಃ ಮನೆಗೆಲಸ

ವಿಳಾಸಃ ಮುದೇನಗುಡಿ ತಾಃ ರೋಣ

**<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 08/08/2024 ರಂದು ಪ್ರಮಾಣೀಕರಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ</u>**

1. ಸಿದ್ದವ್ವ ಮತ್ತು ಆಕೆಯ ಇಬ್ಬರು ಮಕ್ಕಳು ನಮಗೆ ಎರಡು ಗುಂಟೆ ಜಾಗವನು ಖರೀದಿಗೆ ಕೊಟ್ಟಿದ್ದರು. ಆ ಜಾಗದ ಸಂಬಂಧ ತಂಟೇ ಇತ್ತು. ಸುಮಾರು 3–4 ವರ್ಷಗಳ ಹಿಂದೆ ನೀಲವ್ವ ಆ ಖರೀದಿ ಕೊಟ್ಟಂತಹ ಜಾಗದಲ್ಲಿ ಅಗಿ ಹಚ್ಚಲು ಬಂದಿದ್ದಳು. ನಾವುಗಳು ನಮಗೆ ಖರೀದಿಗೆ ಕೊಟ್ಟು ಏಕೆ ತೊಂದರೆ ಕೊಡುತ್ತಿದ್ದೀರಿ ಎಂದು ಕೇಳಿದೆವು. ಆಗ ಬಾಯಿ ಬಾಯಿ ಮಾತಾಯಿತು. ಯಾರು ಯಾರಿಗೂ ಹೊಡೆಯಲಿಲ್ಲಾ. ಈ ಘಟನೆ ಸಂಜೆ 5–00 ಗಂಟೆಗೆ ಆಗಿತ್ತು. ಹನಮಂತ, ಸಂಗಪ್ಪ, ಬಸವ್ವ, ಸಿದ್ದವ್ವ, ನೀಲವ್ವ ಅಲ್ಲಿಗೆ ಬಂದಿದ್ದರು. ಈ ಮೇಲೆ ಹೇಳಿದವರು ಎಲ್ಲರೂ ಈ ಮನೇ ಕೊಟ್ಟು ಹೋಗಿ ಇಲ್ಲವಾದರೆ ಜಾಗ ಕೊಟ್ಟು ಹೋಗಿ ಬೊಸುಡಿ ಮಕ್ಕಳಾ ಇಲ್ಲಿ ಏಕೆ ಇದ್ದೀರಿ ಎಂದು ಬೈದರು, ನನಗೆ ಆರೋಪಿತರು ಹೊಡಿ ಬಡಿ ಮಾಡಲಿಲ್ಲ. ನನ್ನ ತಂದೆ ನನ್ನನ್ನು ಕರೆದುಕೊಂಡು ಮನೆಯ ಒಳಗಡೆ ಹೋದರು.

**ಪಾಟೀ ಸವಾಲು ಆರೋಪಿ ಪರ ಶ್ರೀ SMD ವಕೀಲರಿಂದಃ**

ಆರೋಪಿತರು ನಮ್ಮ ಮೇಲೆ ಮತ್ತೊಂದು ದೂರು ಕೊಟ್ಟು ಅದು ಸಿಸಿ 1079/2020 ಕೊಟ್ಟಿದ್ದಾರೆ ಎಂದರೆ ನಿಜ. ನಾನು ಈ ಸುಳ್ಳು ಕೇಸಿ ಹಾಕಿ ಆರೋಪಿತರಿಗೆ ಹೆದರಿಸಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಯಾವುದೇ ರೀತಿ ಅವಾಚ್ಯವಾಗಿ ಬೈದಿಲ್ಲಾ ಎಂದರೆ ಸರಿಯಲ್ಲ. ಪೊಲೀಸರು ಜಗಳವಾದ ಬಗ್ಗೆ ನನಗೆ ವಿಚಾರಣೆ ಮಾಡಿದರು, ನಾನು ಈ ಜಗಳವಾದ ಬಗ್ಗೆ ಹೇಳಿದ್ದೇನೆ. ಇಷ್ಟು ಬಿಟ್ಟು ಬೇರೆ ಏನು ಗೊತ್ತಿಲ್ಲ. ನಾವು ಆರೋಪಿತರಿಗೆ ಬಡೆದಿಲ್ಲ ,

ಆರೋಪಿತರು ನಮಗೆ ಬಡೆದಿಲ್ಲ ಎಂದರೆ ನಿಜ. ಘಟನೆಯಾದ ಮರುದಿನ ಪೊಲೀಸರು ಬಂದು ಹೇಳಿಕೆ ತೆಗೆದುಕೊಂಡರು. ಪೊಲೀಸರು ಹೇಳಿಕೆ ತೆಗೆದುಕೊಂಡಿಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಆರೋಪಿತರು ನಮ್ಮ ಮನೆಯ ಸುತ್ತ ಮಾಡಿದಂತಹ ಗಲಿಜು ಮತ್ತು ಅವರ ಟ್ರ್ಯಾಕ್ಟರನ ಸಾಮಾನುಗಳನು ನಮ್ಮ ಗೋಡೆಗೆ ಲಗತ್ತಾಗಿ ಇಟ್ಟಿದ್ದನ್ನು ನೋಡಿ ಹೋಗಿದ್ದಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**

**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**

**ನ್ಯಾಯಾಧೀಶರು ರೋಣ .**